ಓ ಎಸ್ ನಂ.53/2023
ಪಿ.ಡಬ್ಲ್ಯೂ-1 ರಮೇಶ ತಂದೆ ಸಾತಲಿಂಗಪ್ಪ

**(ಇಂದು ದಿನಾಂಕಃ 13-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನಾನು ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತೇನೆ. ನನ್ನ ಕುಟುಂಬ ಕಲಬುರಗಿಯಲ್ಲಿ ವಾಸವಾಗಿರುತ್ತದೆ. ಕಲಬುರಗಿಯಲ್ಲಿ ಬಾಡಿಗೆ ಮನೆಯಲ್ಲಿ ನಮ್ಮ ಕುಟುಂಬ ವಾಸವಾಗಿರುತ್ತದೆ. ೪ನೇ ಪ್ರತಿವಾದಿ ಕಲಬುರಗಿಯಲ್ಲಿ ವಾಸವಾಗಿರುತ್ತಾರೆ. ಅವರು ಕಲಬುರಗಿಯ ಬಿದ್ದಾಪೂರ ಕಾಲೋನಿಯಲ್ಲಿ ಅವರ ಕುಟುಂಬದೊಂದಿಗೆ ವಾಸವಾಗಿರುತ್ತಾರೆ. ೬ನೇ ಪ್ರತಿವಾದಿ ಕೂಡಾ ಕಲಬುರಗಿಯಲ್ಲಿ ವಾಸವಾಗಿರುತ್ತಾರೆ. ಅವರ ಜೊತೆಗೆ ಯಾರು ವಾಸವಿರುತ್ತಾರೆ ಎಂದು ನನಗೆ ವಿವರವಾಗಿ ಗೊತ್ತಿಲ್ಲ. ೨ನೇ ಪ್ರತಿವಾದಿ ಕೂಡಾ ಕಲಬುರಗಿಯಲ್ಲಿ ಅವರ ಕುಟುಂಬದೊಂದಿಗೆ ವಾಸವಾಗಿರುತ್ತಾರೆ.

೨. ೨ನೇ ಪ್ರತಿವಾದಿ ಎಲ್ಲಿ ವಾಸವಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ವಿಳಾಸವನ್ನು ದಾವೆಯಲ್ಲಿ ನಾನೇ ತಿಳಿಸಿರುತ್ತೇನೆ. ನಾನು ನನ್ನ ತಂದೆ ಮತ್ತು ನನ್ನ ಅಣ್ಣತಮ್ಮಂದಿರು ಬೇರೆ ಬೇರೆಯಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ೧೯೮೨-೮೩ ರಲ್ಲಿ ನಾವು ಅಣ್ಣತಮ್ಮಂದಿರು ಭಾಗವಾಗಿ ಆಸ್ತಿಗಳನ್ನು ಹಂಚಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ನಾನು ಆಗ ೧೨ ವರ್ಷದವನು ಇದ್ದೆ, ಆದ್ದರಿಂದ ನನ್ನ ಹೆಸರಿನಲ್ಲಿ ಆಸ್ತಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು 1970 ರಲ್ಲಿ ಹುಟ್ಟಿರುತ್ತೇನೆ. ದಿನಾಂಕ 01-06-1982 ರಲ್ಲಿ ಆದ ಮುಟೇಷನನ್ನು ನಾನು ಇಲ್ಲಿಯವರೆಗೂ ಪ್ರಶ್ನಿಸಿರುವುದಿಲ್ಲ.

೩.	ನಮ್ಮ ತಂದೆಯ ಆರೋಗ್ಯ ಸರಿಯಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಯ ವೈದ್ಯಕೀಯ ವೆಚ್ಚವನ್ನು ೬ನೇ ಪ್ರತಿವಾದಿಯೇ ನೋಡಿಕೊಂಡು ಹೋಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.117 ರಲ್ಲಿ ಜಮೀನು ಮೊದಲು ನನ್ನ ತಾತ ದೇವರಾವ್ ಹೆಸರಿನಲ್ಲಿ ಇತ್ತು ಎಂದರೆ ಸರಿ. ದೇವರಾವ್ ರವರು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಹೇಳಲು ನೆನಪಿಲ್ಲ. ನಾವು ವಿಭಾಗ ಆದಾಗಿನಿಂದ ಅವರವರ ಜಮೀನು ಅವರವರೇ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಜಂಟಿಯಾಗಿ ಮಾಡುತ್ತೇವೆ ಎನ್ನುತ್ತಾರೆ. 1982 ರಲ್ಲಿ ನಾವು ವಿಭಾಗವಾಗಿದ್ದರೂ ನಮ್ಮ ತಂದೆಯ ಚಿಕಿತ್ಸಾ ವೆಚ್ಚವನ್ನು ಭರಿಸಲು ಆಸ್ತಿ ಮಾರಾಟ ಮಾಡುತ್ತಿದ್ದಾಗ ಸದರಿ ಆಸ್ತಿಯನ್ನು ಕಬಳಿಸಬೇಕು ಎಂದು ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.